# ಬರಲಿವೆ ಗ್ಲಾಸ್ ಮೊಬೈಲ್



ಬಿಸಿಲ ದಿನಗಳಲ್ಲಿ ಕಾಣುವ ಮೊಬೈಲ್

ಮೊಬೈಲ್ ತಂತ್ರಜ್ಞಾನ ಬೆಳೆಯುತ್ತಿರುವ ರೀತಿ ಎಂತಹವರನ್ನೂ ಬೆರಗುಗೊಳಿಸುತ್ತದೆ. ಪ್ರತಿ ದಿನವೂ ಹೊಸ ರೀತಿಯ, ಹೊಸ ವಿನ್ಯಾಸದ, ಹೊಸ ಸಾಫ್ಟ್‌ವೇರ್‌ಗಳ ಶೋಧ ನಡೆಯುತ್ತಲೇ ಇದೆ. ಜನರ ಮನಸ್ಸನ್ನು ಕದಿಯುವ, ತನ್ಮೂಲಕ ಜೇಬು ಕತ್ತರಿಸುವ ವಿದ್ಯೆ ಮೊಬೈಲ್ ಕಂಪೆನಿಗಳಿಗೆ ಚೆನ್ನಾಗಿ ಸಿದ್ಧಿಸಿದಂತಿದೆ. ಹೊಸ ತಂತ್ರಜ್ಞಾನದ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಗ್ರಾಹಕರಿಗೆ ಸಾಧ್ಯವೇ ಆಗುತ್ತಿಲ್ಲ.

ಮೊಬೈಲ್ ಕ್ಯಾಮೆರಾಗಳಲ್ಲಿ ವೈವಿಧ್ಯಮಯ ಪ್ರಯೋಗಗಳು ಬಂದಾಯಿತು. ಇನ್ನೀಗ ಬರಲಿದೆ ಹೊಸ ಗ್ಲಾಸ್ ಮೊಬೈಲ್! ಸಿಯುಂಗ್ವಾನ್ ಸಾಂಗ್ ಎನ್ನುವ ವಿನ್ಯಾಸಕಾರ ರೂಪಿಸಿರುವ ಈ ಗ್ಲಾಸ್ ಮೊಬೈಲ್‌ಅನ್ನು 'ವಿಂಡೋ ಮೊಬೈಲ್' ಎಂದೂ ಕರೆಯುತ್ತಾರೆ.



ಮಳೆ ದಿನಗಳಲ್ಲಿ ಕಾಣುವ ಮೊಬೈಲ್

ಕೆಲ ಮೊಬೈಲ್ ಕಂಪನಿಗಳು ಕ್ಯಾಮೆರಾ ತಂತ್ರಜ್ಞಾನವನ್ನು ಅಭಿವೃದ್ಧಿಗೊಳಿಸಿದರೆ, ಇನ್ನು ಕೆಲ ಮೊಬೈಲ್ ಕಂಪನಿಗಳು ಮಲ್ಟಿಮೀಡಿಯಾ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಿವೆ. ಆದರೆ ಗ್ಲಾಸ್ ಮೊಬೈಲ್ ಎನ್ನುವುದು ಹವಾಮಾನ ತಿಳಿಸುವ ತಂತ್ರಜ್ಞಾನವನ್ನು ಆಧರಿಸಿದೆ.

ಬಿಸಿಲ ದಿನಗಳಲ್ಲಿ ತುಂಬಾ ಸ್ವಚ್ಛವಾಗಿ ಕಾಣುವ ಈ ಮೊಬೈಲ್ ಹ್ಯಾಂಡ್‌ಸೆಟ್, ಮಳೆಗಾಲದಲ್ಲಿ ತನ್ನ ಮೇಲೆ ನೀರಿನ ತುಂತುರು ಹನಿಗಳ ಚಿತ್ರವನ್ನು ಹೊಂದುತ್ತದೆ. ಅಷ್ಟೇ ಏಕೆ, ಮಂಜು ಮುಸುಕುವ ಕಾಲದಲ್ಲಿ ಮೊಬೈಲ್‌ಅನ್ನು ಮಂಜು ಆವರಿಸಿಕೊಂಡಿದೆಯೇ ಎನ್ನುವಂತೆ ಕಾಣುತ್ತದೆ. ಕೋಣೆಯೊಳಗೆ ಕುಳಿತಿರುವ ಗ್ರಾಹಕನಿಗೆ ಹೊರಗಿನ ಹವಾಮಾನವನ್ನು ಈ ಮೂಲಕ ಮೊಬೈಲ್ ತಿಳಿಸುತ್ತದೆ!

ಈ ಮೊಬೈಲ್‌ನಲ್ಲಿ ಕರೆ ಮಾಡುವುದೂ ವಿಭಿನ್ನ ಶೈಲಿಯಲ್ಲಿ. ಮೊಬೈಲ್ ಸ್ಕ್ರೀನ್ ಮೇಲೆ ಬಾಯಿಯಿಂದ 'ಹಾ..' ಎಂದು ಉಸಿರು ಹಾಯಿಸಿದರೆ ಸಾಕು; ಮೊಬೈಲ್ ನಂಬರ್ ಮೋಡ್‌ಗೆ ಪರಿವರ್ತನೆಗೊಳ್ಳುತ್ತದೆ. ಸ್ಕ್ರೀನ್ ಮೇಲೆ ಉಂಟಾದ ಉಸಿರಿನ ಹಬೆಯ ಮೇಲೆ ಕೈಯಲ್ಲಿ ನಂಬರ್ ಬರೆದು ಕಾಲ್ ಮಾಡಬಹುದು. ಹೆಸರು ಬರೆದೂ ಕಾಲ್ ಮಾಡಬಹುದು.

'ಎಲ್ಲಿ ಸಿಗುತ್ತೆ ಈ ಮೊಬೈಲ್.. ಏನದರ ರೇಟ್..' ಅಂದಿರಾ? ಅವಸರ ಬೇಡ; ಇದಿನ್ನೂ ಟ್ರಯಲ್ ನಡೆಯುತ್ತಿದೆ. ಮಾರುಕಟ್ಟೆಗೆ ಬರಲು ಸ್ವಲ್ಪ ಕಾಲ ಕಾಯಬೇಕು, ಅಷ್ಟೆ!

★ ಮಾವ



ಕರೆ ಮಾಡುವಾಗ



ಮೆಸೇಜ್ ಬರೆಯುವಾಗ